ಆಂಗ್ಲ ಕಲಿಸುತ್ತಾರೆ' ಎಂದು ಮಹಾರಾಜರು ನನ್ನ ಬೆನ್ನು ತಟ್ಟಿದರು.

## ಮಹಾರಾಜ ಆಯಿಲ್ಯ ತಿರುನಾಳ್

ಪುರತಾರ್ಥಿ ತಿರುವನಂತಪುರಕ್ಕೆ ಬಂದಿರುವಳೆಂದೂ, ನನ್ನನ್ನು ಕಾಣಲು ಸಮ್ಮತಿ ಕೇಳುತ್ತಿರುವಳೆಂದೂ ತಿಳಿದು ಅವಳನ್ನು ಕರೆಸಿದೆ. ತಲೆತಗ್ಗಿಸಿಯೇ ನಿಂತಿದ್ದವಳಿಗೆ ಹೇಳಿದೆ. 'ಪುರು, ನೀನು ಬಂದದ್ದು ಒಳ್ಳೆಯದೇ ಆಯಿತು, ಈಗಲಾದರೂ ನಿನ್ನ ಪತಿಯ ಶ್ರೇಷ್ಠತೆ ನಿನಗೆ ಅರಿವಾಗುತ್ತಿದೆಯಲ್ಲವೆ? ನಿನ್ನ ಮಾತಿನಂತೆ ಅವನು ಮಾವೇಲ್ಲಿಕ್ಕರಾದಲ್ಲೇ ಇದ್ದಿದ್ದರೆ ಹೀಗೆ ಉನ್ನತ ಮಟ್ಟವನ್ನು ತಲುಪುತ್ತಿದ್ದಾನೆ? ಯಾವ ಕಾರಣಕ್ಕಾಗಿ ನೀನು ಕೋಪಗೊಂಡೆಯೋ ಅದೇ ಕಾಮಿನಿಯ ಚಿತ್ರಕ್ಕೆ ಈಗ ಚಿನ್ನದ ಪದಕವೂ, ಪ್ರಶಸ್ತಿಗಳೂ ಬರುತ್ತಿವೆಯಲ್ಲ, ಅದಕ್ಕೇನು ಹೇಳುತ್ತಿ?'

'ಇದರಲ್ಲಿ ನನ್ನದೇನು ತಪ್ಪಿದೆ?' ಅಮಾಯಕಳಂತೆ ಕೇಳಿದಳು ಪುರತಾರ್ಥಿ.

'ನಿನ್ನ ಪತಿಯನ್ನು ಶಂಕಿಸುವುದೇ ನಿನ್ನ ತಪ್ಪು. ಅವನ ಹಿರಿಮೆಯನ್ನು ಅರ್ಥ ಮಾಡಿಕೊಳ್ಳದಿರುವುದೇ ನಿನ್ನ ತಪ್ಪು. ನಿನ್ನ ರಾಜಮನೆತನದ ಹಿರಿಮೆ, ರಾಣಿತನ ತೋರಿಸುತ್ತಿರುವುದೇ ನಿನ್ನ ತಪ್ಪು. ಅವನು ನಿನ್ನಂತೆ ಅರಮನೆಯಲ್ಲಿ ಸೆರೆಯಾಗಲು ಹುಟ್ಟಿಲ್ಲ. ಅವನೊಬ್ಬ ಸ್ವಚ್ಛಂದ ಹಕ್ಕಿ. ಅವನ ಕಲೆಯ ಔನ್ನತ್ಯಕ್ಕೆ ಅವನು ಹೀಗೆ ಸ್ವಚ್ಛಂದವಾಗಿರಲು ನೀನು ಬಿಡಬೇಕು. ಸೀತೆ, ರಾಮನೊಂದಿಗೆ ಹೋಗುವುದಕ್ಕಾಗಿ ತನ್ನ ಅರಮನೆಯ ಸೌಲಭ್ಯಗಳನ್ನೆಲ್ಲಾ ತೊರೆದು ನಾರುಮುಡಿಯುಡಲಿಲ್ಲವೆ? ಊರ್ಮಿಳೆ, ತನ್ನ ಪತಿಯ ಮೇಲಿನ ಪ್ರೀತಿಗಾಗಿ, ಲಕ್ಷ್ಮಣ ಕಾಡಿಗೆ ಹೋದಾಗ ತಾನೂ ತಪಸ್ವಿನಿಯಂತೆ ಬಾಳಲಿಲ್ಲವೆ? ಇವರೆಲ್ಲಾ ಪತಿಯ ಶ್ರೇಷ್ಠತೆಗೆ ಬೆಲೆ ಕಟ್ಟಿದವರು. ಅರಮನೆಯ ಐಷಾರಾಮಕ್ಕಲ್ಲ. ನಾನೊಂದು ಮಾತು ಹೇಳುತ್ತೇನೆ ಕೇಳು, ನಿನ್ನ ಪತಿಯ ಜೊತೆಗಿರುವುದೇ ನಿನಗೆ ಶೋಭೆ. ಅವನು ತಿರುವನಂತಪುರದಲ್ಲಿರುವುದು ಎಲ್ಲ ರೀತಿಯಿಂದಲೂ ಸರಿ, ಎಂತಲೇ ನೀನೂ ಇಲ್ಲೇ ಬಂದು ಮಡತ್ ಮಡಹೋಂನಲ್ಲಿ ಇರು. ಅದು ನಿಮ್ಮಿಬ್ಬರ ದಾಂಪತ್ಯ ಜೀವನಕ್ಕೂ ಒಳಿತು. ಹಠ ಮಾಡಿದೆಯಾದರೆ ನಿನ್ನ ಬಾಳಿನ ಅನರ್ಘ್ಯ ರತ್ನವೊಂದನ್ನು ನೀನು ಕಳೆದುಕೊಳ್ಳುತ್ತೀ.'

ನನ್ನ ಮಾತಿನ ಆಳ ಅರ್ಥ ಅವಳಿಗಾಗಿರಬೇಕು. ಪುರತಾರ್ಥಿ ಅರಮನೆಯಲ್ಲಿಯೇ ಉಳಿದಳು. ಮಾವೇಲ್ಲಿಕ್ಕರಾಗೆ ಹಿಂತಿರುಗಲಿಲ್ಲ. ನಾನು ಅಂದೇ ರವಿವರ್ಮನನ್ನು ಸ್ಟುಡಿಯೋದಲ್ಲಿ ಭೇಟಿಯಾದೆ. ಪುರತಾರ್ಥಿಗೆ ಹೇಳಿದಂತೆಯೇ ಅವನಿಗೂ ಬುದ್ಧಿ ಹೇಳಿದೆ. 'ನೀನು ಕಲೆಯನ್ನೇ ನಿನ್ನ ಉಸಿರಾಗಿಸಿಕೊಂಡಿರುವುದು ಸರಿ. ಆದರೆ ಒಂದು ದಿನ ಒಂಟಿತನ ನಿನ್ನನ್ನು ಕಾಡಿದಾಗ ಮಡದಿ ಮಕ್ಕಳ ಬೆಲೆ ಅರಿಯುತ್ತೀಯೆ. ಅವರ ಸಾಮೀಪ್ಯ, ಒಡನಾಟವಿಲ್ಲದೆ ತತ್ತಳಿಸುತ್ತೀಯ. ಆದ್ದರಿಂದ ಪುರತಾರ್ಥಿಯೊಂದಿಗೆ ಇಲ್ಲೇ ಸಂಸಾರ ಪ್ರಾರಂಭಿಸು. ಅವಳೂ ಒಪ್ಪಿಕೊಂಡಿದ್ದಾಳೆ, ಪ್ರೀತಿ ಇದ್ದಲ್ಲೇ ಈರ್ಷ್ಯೆ ಇರುವುದು ಎಂಬುದನ್ನು ನೀನೂ ತಿಳಿಯಬೇಕು. ಪುರು ನಿನ್ನನ್ನು ತುಂಬಾ ಪ್ರೀತಿಸುವುದರಿಂದಲೇ ತನಗೊಬ್ಬಳಿಗೇ ನೀನಿರಬೇಕು ಎಂದು ಬಯಸುತ್ತಾಳೆ. ನಿನ್ನ ಕಲೆಯ ಔನ್ನತ್ಯಕ್ಕೆ ಅವಳೇನು ಅಡ್ಡಿ ಮಾಡುವುದಿಲ್ಲ. ಅವಳನ್ನು ಪ್ರೀತಿಯಿಂದ ಸ್ವೀಕರಿಸು' ಎಂದೆ.

ನನ್ನ ಹಿತವಚನಗಳು ಇಬ್ಬರಿಗೂ ಮನತಟ್ಟಿರಬೇಕು. ಇಬ್ಬರೂ ಮಡತ್ ಮಡಹೋಂನಲ್ಲಿ ಎರಡು ವರ್ಷಗಳು ಸಂತಸದಿಂದ ಜೊತೆಗಿದ್ದರು. ಅವರ ಇಬ್ಬರು ಮಕ್ಕಳು ರಾಮವರ್ಮ, ಕೇರಳವರ್ಮ ನಮ್ಮ ಅರಮನೆಗೂ ಬಂದು ಹೋಗುತ್ತಿದ್ದರು. ನನಗೂ ಆ ಮಕ್ಕಳೆಂದರೆ ತುಂಬಾ ಪ್ರೀತಿ.

ಆದರದೇಕೋ ಈ ನಡುವೆ ನನ್ನ ಆರೋಗ್ಯ ಹದಗೆಡಲಾರಂಭಿಸಿತು. ಜೊತೆಗೆ ಅರಮನೆಯಲ್ಲಿ ಎರಡು ಪಕ್ಷಗಳು ಪ್ರಾರಂಭವಾದವು. ಒಂದು ನನ್ನ ಬೆಂಬಲಿಗರದ್ದು, ಮತ್ತೊಂದು ಯುವರಾಜ ವಿಶಾಖಂ ತಿರುನಾಳ್‌ನ ಒಡನಾಡಿಗಳದ್ದು. ಅವನು ದಿವಾನ್ ಮಾಧವರಾಯರ ಅನುಭವಕ್ಕೆ ಬೆಲೆ ನೀಡದೆ ಅವರ ಮಾತನ್ನು ಮೂಲೆಗೆ ತಳ್ಳುತ್ತಿದ್ದನು. ಇದು ನನ್ನ ಗಮನಕ್ಕೆ ಬಂದಾಗ ನಾನು ಅವರನ್ನು ಕೆಲಸದಿಂದ ಮುಕ್ತರನ್ನಾಗಿಸಿ, ಮುಂಬಯಿಗೆ ಕಳುಹಿಸಿದೆ.

ರಾಜ್ಯಭಾರವನ್ನು ತಾತ್ಕಾಲಿಕವಾಗಿ ವಿಶಾಖಂ ಕೈಗೆ ತೆಗೆದುಕೊಂಡು ಗೋಪಾಲನ್ ಎಂಬುವನನ್ನು ದಿವಾನ ಪದವಿಗೇರಿಸಿದ. ನಾನು ಹಾಸಿಗೆ ಹಿಡಿದೆ. ಆ ಸ್ಥಿತಿಯಲ್ಲಿ ರಾಜರವಿವರ್ಮನಿಗೆ ಪ್ರತಿಕೂಲವಾದ ಸನ್ನಿವೇಶಗಳು ಅರಮನೆಯಲ್ಲಿ ನಡೆಯುತ್ತಿದ್ದರಿಂದ ಪುರತಾರ್ಥಿ ಹಾಗೂ ಮಕ್ಕಳನ್ನು ಮಾವೆಲ್ಲಿಕ್ಕರಾಕ್ಕೂ, ರವಿವರ್ಮನನ್ನು ಕಿಳಿಮಾನೂರಿಗೂ ಕಳುಹಿಸಿದೆ.

ಈ ಮಧ್ಯೆ ರವಿವರ್ಮನ 'ಶಾಕುಂತಲೆಯ ಪತ್ರಲೇಖನ' ಚಿತ್ರಕ್ಕೆ ಮದರಾಸಿನ ಮತ್ತೊಂದು ಪ್ರದರ್ಶನದಲ್ಲಿ ಪದಕ ದೊರೆಯಿತು. ಅವನಿಗೆ ಅಗತ್ಯವಾಗಿದ್ದ ರೂಪದರ್ಶಿಗಳನ್ನು ನಾನೇ ಒದಗಿಸುತ್ತಿದ್ದೆ. ಹೀಗಾಗಿ ಅವನು ಅನೇಕ ಪುರಾಣ ಪ್ರಸಂಗಗಳನ್ನು ಚಿತ್ರಿಸಿದ.

ನನ್ನ ಅಂತ್ಯ ಸಮೀಪಿಸಿತು ಎನಿಸಿದಾಗ ನಾನು ಕಿಳಿಮಾನೂರಿಗೆ ಕರೆ ಕಳುಹಿಸಿದೆ. ರವಿವರ್ಮ ವ್ಯಾಕುಲಚಿತ್ತನಾಗಿ ನನ್ನ ಬಳಿ ಬಂದ. ನನ್ನ ಹಾಸಿಗೆಯಲ್ಲಿ ಕುಳ್ಳಿರಿಸಿಕೊಂಡು, ಅವನ ಕೈ ನೇವರಿಸುತ್ತಾ ಹೇಳಿದೆ 'ರವಿ, ನಿನ್ನಿಂದ ನಮ್ಮ ತಂಜಾವೂರಿಗೇ ಹೆಮ್ಮೆ, ನಿನ್ನ ಕಲೆ ತುಂಬಾ ಶ್ರೇಷ್ಠವಾದದ್ದು. ಯಾವ ಕಾರಣಕ್ಕೂ ಅದನ್ನು ಕೈಬಿಡದಿರು. ನಿನಗೇನಾದರೂ ಕಷ್ಟ ಬಂದರೆ ದಿವಾನ್ ಮಾಧವರಾಯರ ಸಹಾಯ ಪಡೆದುಕೋ, ನೀನು ಔನ್ನತ್ಯ ಹೊಂದಲು ಅವರು ನೆರವಾಗುತ್ತಾರೆ. ನನ್ನ ನೆನಪಾಗಿ ಈ ವಜ್ರದುಂಗುರ ನಿನ್ನ ಕೈಯಲ್ಲಿರಲಿ.' ನನ್ನ ಉಂಗುರವನ್ನು ರವಿವರ್ಮನ ಬೆರಳಿಗೆ ತೊಡಿಸಿದೆ. ಅವನ ಕಣ್ಣುಗಳು ತೇವವಾದವು, ನನ್ನದರಂತೆಯೇ.

## ದಿವಾನ್ ಮಾಧವರಾವ್

ನಾನು ಕಿಳಿಮಾನೂರಿಗೆ ಬಂದಾಗ ರವಿವರ್ಮರು ಅಲ್ಲಿರಲಿಲ್ಲ. ಮಾವೇಲ್ಲಿಕರಾಗೆ ಹೆಂಡತಿ ಮಕ್ಕಳನ್ನು ನೋಡಲು ಹೋಗಿದ್ದರು. ನನ್ನನ್ನು ಸ್ವಾಗತಿಸಿದ ರಾಜರಾಜವರ್ಮರು 'ತಿರುವನಂತಪುರದ ವಿಚಾರ ಹೇಳಲು ನಾಲಿಗೆಯೇ ಏಳುತ್ತಿಲ್ಲ, ರವಿವರ್ಮನನ್ನು ಕರೆಸಿಕೊಂಡು ಅವನಿಗೆ ವಜ್ರದುಂಗುರವಿತ್ತು ಆಶೀರ್ವದಿಸಿದ ಮಹಾರಾಜರು, ಅದಾದ ನಾಲ್ಕು ದಿನಗಳಲ್ಲಿ ಪರಲೋಕ ಸೇರಿದರು. ಆಡಳಿತವನ್ನು ಕೈಗೆ ತೆಗೆದುಕೊಂಡ ವಿಶಾಖಂ ತಿರುನಾಳ್ ದಿವಾನ್ ಗೋಪಾಲನೊಂದಿಗೆ ಸೇರಿ ರವಿವರ್ಮನ 'ರಾಜಾ' ಬಿರುದನ್ನು ಹಿಂದಕ್ಕೆ ಪಡೆದುಕೊಂಡ. ಸಾಲದೆಂಬಂತೆ ಮಹಾರಾಜರು ಉಡುಗೊರೆಯಾಗಿ ಕೊಟ್ಟಿದ್ದ ವಜ್ರದುಂಗುರವನ್ನು ಖಜಾನೆಗೆ ಹಿಂತಿರುಗಿಸಬೇಕೆಂದು ಆಜ್ಞಾಪಿಸಿ, ರವಿವರ್ಮನನ್ನು ತಿರುವನಂತಪುರವನ್ನೇ ಬಿಡುವಂತೆ ಆಜ್ಞೆ ಮಾಡಿದ. ಆಯಿಲ್ಯ ಮಹಾರಾಜರು ಇಲ್ಲದ ತಿರುವನಂತಪುರ ಯಾರಿಗೆ ಬೇಕು? ರವಿವರ್ಮ ಈಗ ಇಲ್ಲೇ ಇದ್ದಾನೆ' ಎಂದು ನೊಂದು ನುಡಿದರು. ಅಷ್ಟರಲ್ಲಿ ರವಿವರ್ಮರು ಹಿಂತಿರುಗಿ ಬಂದರು. 'ರಾಜರೇ, ನೆನಪುಗಳು ಉಳಿಯಬೇಕೆಂದರೆ ಉಂಗುರದ ಅಗತ್ಯವಿಲ್ಲವಲ್ಲ. ನಿಮಗೆ ದೊರಕಿರುವ ಮಹಾರಾಜರ ಬೆಂಬಲ, ಆಶೀರ್ವಾದವನ್ನು ಯಾರೂ ಕಸಿದುಕೊಳ್ಳಲಾರರು, ಚಿಂತಿಸಬೇಡಿ' ಎಂದೆ. ತನ್ನ ಸೋದರಮಾವನಿಂದ ವಿವರಗಳೆಲ್ಲಾ ನನಗೆ ತಿಳಿದಿದೆ ಎಂದು ಅರಿವಾದ ರವಿವರ್ಮ 'ನಿಮ್ಮಂತಹ ಹಿರಿಯರ ಬೆಂಗಾವಲು ನನಗಿರುವಾಗ ನನಗ್ಯಾವ ಚಿಂತೆ? ಅದನ್ನೇ ಸಾಯುವ ಕಾಲಕ್ಕೆ ಮಹಾರಾಜರೂ ಹೇಳಿದರು. ನಾನು ಇಲ್ಲಿ ಕಿಳಿಮಾನೂರಿನಲ್ಲಿ ನೆಮ್ಮದಿಯಾಗಿಯೇ ಇದ್ದೇನೆ.'

'ಆದರೆ ನೀವು ನೆಮ್ಮದಿಯಾಗಿ, ನಿಶ್ಚಿಂತೆಯಾಗಿ ಭಾರತದ ಈ ಮೂಲೆಯಲ್ಲಿದ್ದುಬಿಟ್ಟರೆ ನಿಮ್ಮ ಕಲೆ ಪ್ರಪಂಚಕ್ಕೆ ತಿಳಿಯುವುದು ಹೇಗೆ? ಅದು ಪ್ರಕಾಶಿಸಬೇಡವೇ? ಲೋಕದ ಕಣ್ಣು ಅದರ ಮೇಲೆ ಬೀಳಬೇಡವೆ? ನಡೆಯಿರಿ ನಿಮ್ಮ ಚಿತ್ರಕಲಾ ಕೊಠಡಿಗೆ ನನ್ನನ್ನು ಕರೆದೊಯ್ಯಿರಿ, ನಿಮ್ಮೊಂದಿಗೆ ಮಾತನಾಡುವುದಿದೆ' ಎಂದೆ. 'ನೀವು ನನಗಿಂತ ಹಿರಿಯರು, ನನ್ನನ್ನು ಮೊದಲಿನಂತೆ ರವಿವರ್ಮ ಎನ್ನಬಾರದೆ? ಇದೇಕೆ ಇಷ್ಟೊಂದು ಮರ್ಯಾದೆಯ ಸಂಬೋಧನೆ?' ಕೇಳಿದರು ರವಿವರ್ಮ.

'ಇಲ್ಲಿ ವಯಸ್ಸು ಪ್ರಶ್ನೆ ಬರುವುದಿಲ್ಲ ವರ್ಮರೇ, ಇದು ನಿಮ್ಮ ಬಿರುದಿನ ಸ್ಥಾನಕ್ಕೆ ನಾನು ಕೊಡಬೇಕಾದ ಗೌರವ ಅಷ್ಟೇ. ಮೊದಲಿನಂತೆ ಬಾ ಹೋಗು ಎಂದು ಸಂಬೋಧಿಸಲಾಗದು' ವಿವರಣೆಯಿತ್ತೆ.

ರವಿವರ್ಮರ ಕೊಠಡಿಯಲ್ಲಿ ನಾನೊಂದು ಚಿತ್ರವನ್ನು ತುಂಬಾ ಇಷ್ಟಪಟ್ಟೆ ಅವರು ನಗುತ್ತಾ ಹೇಳಿದರು 'ಇದು ನಾನು ಬರೆದದ್ದಲ್ಲ, ನನ್ನ ತಮ್ಮ ರಾಜವರ್ಮ ಬರೆದದ್ದು. ನಾನು ತಿರುವನಂತಪುರದಲ್ಲಿದ್ದಾಗ ಅವನು ನನ್ನ ತಂಗಿ ಮಂಗಳ ಇಬ್ಬರು ಚಿತ್ರ ರಚನಾ ತರಬೇತಿಯ ತರಗತಿಗಳಿಗೆ ಹೋಗಿ ವಿಧಿವತ್ತಾಗಿ ಕಲಿತಿದ್ದಾರೆ. ನನ್ನಂತಲ್ಲ'. 'ಅಂದ ಮೇಲೆ ಕಲೆ ನಿಮ್ಮ ವಂಶದ ರಕ್ತದಲ್ಲೇ ಹರಿದಿದೆ. ನಿಮ್ಮ ಇನ್ನೊಬ್ಬ ತಮ್ಮ ಏನು ಮಾಡುತ್ತಿದ್ದಾನೆ? ಗೋದವರ್ಮ ಒಳ್ಳೆಯ ವೈಣಿಕ.